ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾ.ಕ.ಹೊ/90/2015-16 ದಿನಾಂಕ:05-04-2016

| ಅರ್ಜಿದಾರರು | ತಕರಾರುದಾರರು |
|---|---|
| 1)ಗೌರಮ್ಮ ಗಂಡ ಲೇಟ್ ಗಂಗಾನಹಳ್ಳಿ ಬಸಲಿಂಗಪ್ಪ<br>2)ಕೊಟ್ರಪ್ಪ ತಂದೆ ಲೇಟ್ ಗಂಗಾನಹಳ್ಳಿ ಚನ್ನಬಸಪ್ಪ<br>ಗುಣಸಾಗರ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 144/ಎ. 146ಎ. ವಿಸ್ತೀರ್ಣ 1-72. 2-43 ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 144/ಎ. 146ಎ. ವಿಸ್ತೀರ್ಣ 1-72. 2-43 ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಗುಣಸಾಗರ ಗ್ರಾಮದ ಗೌರಮ್ಮ ಗಂಡ ಲೇಟ್ ಗಂಗಾನಹಳ್ಳಿ ಬಸಲಿಂಗಪ್ಪ. ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಸೂಲದಹಳ್ಳಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ: 24-09-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಅರ್ಜಿದಾರರು ಮರಣ ಪ್ರಮಾಣ ಪತ್ರ ಲಗತ್ತಿಸಿಲ್ಲದ ಕಾರಣ ಈ ಪ್ರಕರಣದ ಎಂ.ಆರ್ ನಂ: 11/2015-16. ದಿನಾಂಕ:25-10-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 29-12-2015 ರಿಂದ 05-04-2016 ರ ವರೆಗೆ ವಿಚಾರಣೆ ಮಾಡಲಾಯಿತು

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಸೂಲದಹಳ್ಳಿ ಗ್ರಾಮದ ಸನಂ 144/ಎ. 146ಎ. ವಿಸ್ತೀರ್ಣ 1-72. 2-43 ಎಕ್ರೆ ಜಮೀನುಗಳು ನಮ್ಮ ಮಾವನವರಾದ ಗಂಗನಾನಹಳ್ಳಿ ಚನ್ನಬಸಪ್ಪ ತಂದೆ ಬಸಲಿಂಗಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 24-08-2002 ರಂದು ಹಾಗೂ ನಮ್ಮ ಅತ್ತೆಯವರಾದ ನಾಗಮ್ಮ ಗಂಡ ಚನ್ನಬಸಪ್ಪ ಇವರು ನಿಧನ ಹೊಂದಿರುತ್ತಾರೆ. ಹಾಗೂ ನನ್ನ ಗಂಡನಾದ ಗಂಗಾನಹಳ್ಳಿ ಬಸಲಿಂಗಪ್ಪ ತಂದೆ ಚನ್ನಬಸಪ್ಪ ಇವರು ದಿನಾಂಕ 03-11-2013 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಪೋತಿವಾರಸು ಹಕ್ಕಿನಂತೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

46

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 144/ಎ. 146ಎ. ವಿಸ್ತೀರ್ಣ 1–72. 2–43 ಎಕ್ರೆ ಜಮೀನುಗಳು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಗೌರಮ್ಮ ಗಂಡ ಲೇಟ್ ಗಂಗಾನಹಳ್ಳಿ ಬಸಲಿಂಗಪ್ಪ. ಕೊಟ್ರಪ್ಪ ತಂದೆ ಲೇಟ್ ಗಂಗಾನಹಳ್ಳಿ ಚನ್ನಬಸಪ್ಪ. ಗುಣಸಾಗರ ಗ್ರಾಮ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 05–04–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಸೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಗೌರಮ್ಮ ಗಂಡ ಲೇಟ್ ಗಂಗಾನಹಳ್ಳಿ ಬಸಲಿಂಗಪ್ಪ. ಕೊಟ್ರಪ್ಪ ತಂದೆ ಲೇಟ್ ಗಂಗಾನಹಳ್ಳಿ ಚನ್ನಬಸಪ್ಪ. ಗುಣಸಾಗರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತತದೆ.